**OS 97/2023**

**PW-1: ಸಂಜೀವರಾಯಪ್ಪ**

ದಿನಾಂಕಃ **07.01.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಡಿ.ಪಿ.ಆರ್. ವಕೀಲರಿಂದಃ**

1 ನೇ ಪ್ರತಿವಾದಿ ನನಗೆ ಸಂಬಂದವಿರುವುದಿಲ್ಲ. 1 ನೇ ಪ್ರತಿವಾದಿಯನ್ನು ಯಾವ ಕಾರಣಕ್ಕೆ ಪಕ್ಷಗಾರನ್ನಾಗಿ ಮಾಡಲಾಗಿದೆ ಎಂದರೆ ಗೊತ್ತಿಲ್ಲ. ಈ ದಾವೆಯನ್ನು ಸಲ್ಲಿಸಲು ಮಾಹಿತಿಯನ್ನು ವಕೀಲರಿಗೆ ನಾನೇನೀಡಿರುತ್ತೇನೆ. ಪ್ರತಿವಾದಿ 1 ಮತ್ತು 2 ರವರನ್ನು ಪಕ್ಷಗಾರರನ್ನಾಗಿ ಮಾಡಲು ನಮ್ಮ ವಕೀಲರಿಗೆ ಹೇಳಿರುತೆತೇನೆ. ದಾವಾ ಸ್ವತ್ತಿನ ಸ.ನಂ. 57/2 12 ಎಕರೆ 28 ಗಂಟೆ ಇರುತ್ತದೆ. ದಾವಾ ಸ್ವತ್ತಿನ ಚೆಕ್ಕು ಬಂದಿಯನ್ನು ಪೂಃ ಪಾತಣ್ಣ, ಪಃ ದಾರಿ, ಉಃಪಾತಣ್ಣ, ದಃಕೃಷ್ಣಪ್ಪ. ನನ್ನ ತಂದೆಯ ಹೆಸರು ನಾಗಪ್ಪ. ನನ್ನ ತಂದೆಯ ತಂದೆಯ ಹೆಸರು ಸಂಜೀವಪ್ಪ. ಸಂಜೀವಪ್ಪನ ತಂದೆಯ ಹೆಸರು ಹೊನ್ನುರಪ್ಪ. ಹೊನ್ನುರಪ್ಪನ ಹೆಂಡತಿಯ ಹೆಸರು ಅಚ್ಚಮ್ಮ. ಹೊನ್ನುರಪ್ಪನಿಗೆ ಇಬ್ಬರು ಮಕ್ಕಳು. ಹಿರಿಯವರು ಹೊನ್ನುರಪ್ಪ ಕಿರಿಯವರು ನಾಗಪ್ಪ. ಹೊನ್ನುರಪ್ಪನಿಗೆ ಸಂಜೀವಪ್ಪ, ತಿಮ್ಮಪ್ಪ ಮತ್ತು ನಾಗಪ್ಪ ಎಂಬ ಮೂರು ಜನ ಮಕ್ಕಳು ಎಂರದೆ ಸರಿಯಲ್ಲ.

ಸಂಜೀವಪ್ಪನ ಹೆಂಡತಿಯ ಹೆಸರು ಕೊಣಮ್ಮ ಎಂಬುದು ಸರಿ. ಸಂಜೀಪ್ಪನಿಗೆ ಹೊನ್ನುರಪ್ಪ ಮತ್ತು ನಾಗಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ನಾಗಪ್ಪನ ಪತ್ನಿ ಅನುಸುಯಮ್ಮ ಎಂದರೆ ಸರಿ . ಹೊನ್ನುರಪ್ಪನ ಪತ್ನಿಯ ಹೆಸರು ನಾರಾಯಣಮ್ಮ. ಅವರಿಗೆ ಸಂತತಿ ಇರುವುದಿಲ್ಲ. ಹೊನ್ನುರಪ್ಪನಿಗೆ ವಿವಾಹ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಹೊನ್ನುರಪ್ಪನ ಮಗ ತಿಮ್ಮಪ್ಪನ ಪತ್ನಿಯ ಹೆಸರು ಗಂಗಮ್ಮ ಎನ್ನುವುದು ಗೊತ್ತಿಲ್ಲ. ತಿಮ್ಮಪ್ಪನಿಗೆ ಅಂಜೀನಪ್ಪ ಎಂಬ ಮಗ ಇದ್ದ ಎಂಬುದು ಗೊತ್ತಿಲ್ಲ. ಅಂಜಿನಪ್ಪನಿಗೆ ಗಂಗಮ್ಮ ಎಂಬ ಪತ್ನಿ ಇದ್ದರು ಎಂಬುದು ಗೊತ್ತಿಲ್ಲ.

ಆಂಜೀನಪ್ಪನಿಗೆ ರಾಮಾಂಜಿನಮ್ಮ, ತಿಮ್ಮಪ್ಪ ನಾರಪ್ಪ ಎಂಬ ಮಕ್ಕಳು ಇದ್ದರೆ ಎಂಬುದು ಗೊತ್ತಿಲ್ಲ. ಹೊನ್ನುರಪ್ಪನ ಮಗ ನಾರಪ್ಪ ಇದ್ದಾರ ಎಂಬುದು ಗೊತ್ತಿಲ್ಲ. ನಾರಾಪ್ಪನಿಗೆ ಮುತ್ಯಾಲಮ್ಮ ಎಂಬ ಪತ್ನಿ ಇದ್ದಾರೆ ಎಂಬುದು ಗೊತ್ತಿಲ್ಲ. ಸಂಜೀವಪ್ಪ ತಿಮ್ಮಪ್ಪ ಮತ್ತು ನಾರಾಪ್ಪ ಮೃತ ಪಟ್ಟಿದ್ದಾರೆ ಎಂದರೆ ಸಾಕ್ಷಿ ಹೊನ್ನುರಪ್ಪ ಒಬ್ಬನೆ ಮಗ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಯ ತಂದಯ ಹೆಸರು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ನಾರಪ್ಪನ ತಂದೆಯ ಹೆಸರು ಗೊತ್ತಿಲ್ಲ. ಪ್ರತಿವಾದಿ1 ಮತ್ತು 2 ರವರು ಅಂಜೀನಪ್ಪನ ಮಕ್ಕಳು ಎಂದರೆ ಗೊತ್ತಿಲ್ಲ. ನಮ್ಮದು ತಿಮ್ಮಮ್ಮನಹಳ್ಳಿ. ಪ್ರತಿವಾದಿಗಳದ್ದು ತಿಮ್ಮಮ್ಮನಹಳ್ಳಿ. ಪ್ರತಿವಾದಿಗಳು ನಮ್ಮ ಕುಲಸ್ಥರು ಆದರೆ ಇಬ್ಬರದು ಬೇರೆ ಬೇರೆ ಗೋತ್ರ. ಹೊನ್ನುರಪ್ಪನಿಗೆ 3 ಜನ ಮಕ್ಕಳಿದ್ದರೂ ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಹಣಿ ನನ್ನ ಹೆಸರಿನಲ್ಲಿ ಬರುತ್ತಿದೆ 1980.81 ರಲ್ಲಿ ಆಂಜೀನಪ್ಪನ ಹೆಸರು ನಮೂದು ಆಗಿರುತ್ತದೆ. ಆಂಜೀನಪ್ಪನವರು ತಂದೆಯ ಹೆಸರು ತಿಮ್ಮಪ್ಪ ಎಂಬುದು ಗೊತ್ತಿಲ್ಲ.

ಆಂಜೀನಪ್ಪನ ಹೆಸರು 1980.81 ರಲ್ಲಿ ಪಹಣಿಯಲ್ಲಿ ನಮೂದಾಗಿದ್ದು ಯಾವ ಆಧಾರದ ಮೇಲೆ ನಮೂದಾಗಿದೆ ಗೊತ್ತಿಲ್ಲ. ಆಂಜೀನಪ್ಪನ ಹೆಸರು ಮತ್ತು ನಮ್ಮ ತಂದೆಯ ಹೆಸರು ಐ ಹೆಚ್ ಆರ್ 7/1980.81 ರಂತೆ ಪಹಣಿಯಲ್ಲಿ ನಮೂದಾಗಿದೆ ಎಂದರೆ ಸರಿ. ನನ್ನ ತಂದೆ 1918 ರಲ್ಲಿ ಮೃತಪಟ್ಟಿರುತ್ತಾರೆ. ನಾನ ು ಹುಟ್ಟಿದ ತಕ್ಷಣ ನನ್ನ ತಾಯಿ ಮೃತ ಪಟ್ಟಿದ್ದು ನನಗೆ ಗೊತ್ತಿರುವುದಿಲ್ಲ. ನಮ್ಮ ತಂದೆಯ ಮರಣ ಪ್ರಮಾಣ ಪತ್ರ ನನ್ನ ಬಳಿ ಇರುತ್ತದೆ. 2003.04 ರಲ್ಲಿ ನನ್ನ ಹೆಸರಿನಲ್ಲಿ ಪಹಣಿ ನಮೂದಾಗಿರುತ್ತದೆ. ಪಹಣಿ ನಮೂದಿಸುವ ಸಲುವಾಗಿ ನಾನೇ ಅರ್ಜಿ ನೀಡಿದ್ದೇನೆ. ನಾನು ಅರ್ಜಿ ನೀಡಿದ ನಂತರ ಎಂ.ಆರ್.2/2003.04 ರಂತೆ ನಮೂದಾಗಿರುತ್ತದೆ ಎಂಬುದು ಸರಿ. ಸಾಕ್ಷಿ ತೋರಿಸಿದ ಮುಟೇಷನ್ ವಹಿಯನ್ನು ಒಪ್ಪಿಕೊಂಡ ಮೇರೆಗೆ ದಾಖಲೆಯನ್ನು ನಿಡಿ.1 ಎಂದು ಗುರುತಿಸಲಾಯಿತು. ನನ್ನ ತಂದೆಗೆ ನಾನು ಒಬ್ಬನೆ ಮಗ. ಐ ಹೆಚ್ ಆರ್ 7/1980.81 ರಂತೆ

ಅಂಗಿಕಾರ ವಾದ ಸಂದರ್ಭ ನಾಗಣ್ಣ ಮತ್ತು ಆಂಜಿನಪ್ಪನವರು ಒಟ್ಟಿಗೆ ಸ್ವಾಧಿನದಲ್ಲಿ ಇದ್ದರು ಎಂಬುದು ಸರಿಯಲ್ಲ. ಆಂಜೀನಪ್ಪ ಎಂದು ಮರಣ ಹೊಂದಿದ್ದಾರೆ ಗೊತ್ತಿಲ್ಲ. ನೀವು ಮತ್ತು ಅಂಜೀನಪ್ಪ ಬ್ಯಾಂಕಿನಲ್ಲಿ ಸಾಲಪಡೆದಿರುತ್ತೀರಿ ಎಂದರೆ ಸಾಕ್ಷಿ ನಾವು ಮಾತ್ರ ಪಡೆದಿದ್ದೇವೆ ಎಂದು ನುಡಿದಿರುತ್ತಾರೆ. ಅದರಂತೆ ನಾವಿಬ್ಬರೂ ಬ್ಯಾಂಕಿನಲ್ಲಿ ಒಟ್ಟಿಗೆ ಅಡಮಾನ ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಈ ನನಗೆ ತೋರಿಸಿದ ನೋಂದಾಯಿತ ಅಡಮಾನ ಪತ್ರದಲ್ಲಿರುವ ಭಾವಚಿತ್ರ ನನ್ನದಾಗಿರುತ್ತದೆ. ಸದರಿ ದಾಖಲೆಯನ್ನು ನಿಡಿ.2 ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಕಾಣುವ ಭಾವಚಿತ್ರ ಆಂಜೀನಪ್ಪ ನವರದು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ದಾಖಲೆ ಸೃಷ್ಟಿ ಮಾಡಲಾಗಿದೆ ಎಂದು ಉತ್ತರಿಸಿರುತ್ತಾರೆ.

ಸದರಿ ದಾಖಲೆಯಲ್ಲಿರು ಸಹಿಗಳನ್ನು ನನ್ನವೇ ಎಂದರೆ ಸರಿಯಲ್ಲ. ನಿಡಿ.2 ಅಡಮಾನ ಪತ್ರವನ್ನು ಸ.ನಂ.57/2 ಕ್ಕೆ ಸಂಬಂದಪಟ್ಟಂತೆ ಬರೆದುಕೊಡಲಾಗಿದೆ. ನಿಡಿ.2 ರಂತೆ ಪೂಃಪಾತಣ್ಣನವರು ಜಮೀನು, ಪಃರಸ್ತೆ, ಉಃ ಪಾತಣ್ಣ, ದಃಕೃಷ್ಣಪ್ಪ ಈ ಚೆಕ್ಕುಬಂದಿಇರುವ ಸ್ವತ್ತಿಗೆ ಬರೆದುಕೊಡಲಾಗಿದೆ ಎಂದರೆ ಸರಿಯಲ್ಲ. ನಿಡಿ.2 ನೋಂದಣಿ ಅಡಮಾನ ಪತ್ರವನ್ನು ನಾನೇ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ಅಂಜೀನಪ್ಪ ಇಬ್ಬರು ಸೇರಿ ಒಪ್ಪಿ ಅಡಮಾನ ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಆಂಜೀನಪ್ಪನವರು ಪತ್ರಕ್ಕೆ ಹೆಬ್ಬೆಟ್ಟಿನ ಗುರುತು ಮಾಡಿರುತ್ತಾರೆ ಎಂದು ಗೊತ್ತಿಲ್ಲ.

( ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀಸವಾಲಿಗೆ ಕಾಲವಕಾಶ ಕೋರಿದ್ದು ಅನುಮತಿ ನೀಡಿ ಮುಂದುವರಿದ ಪಾಟೀಸವಾಲಿಗೆ ಮುಂದೂಡಲಾಯಿತು)

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.